CC 325/2008
CW- 17 PW -1

# ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ

## ಸಿ.ಸಿ ನಂ. 325/2008

ದಿನಾಂಕಃ**.24.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**17** | ಪ್ರಾಸಾ-**2** |
|---|---|
| ಹೆಸರು | - ವಿನೋದ್ ಭಟ್ |
| ತಂದೆ / ಗಂಡನ ಹೆಸರು | - ಮಂಜ ಭಟ್ |
| ವಯಸ್ಸು | - **52** |
| ಉದ್ಯೋಗ | - ಪೊಲೀಸ್ ಇನ್ಸ್ ಪೆಕ್ಟರ್ |
| ವಿಳಾಸ | - ಎಸ್ ಸಿ ಆರ್ ಬಿ, ಬೆಂಗಳೂರು. |

**ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-**

**17.01.2007** ರಿಂದ **04.03.2009** ರವರೆಗೆ ಸಾತನೂರು ಪೊಲೀಸ್ ಠಾಣೆಯಲ್ಲಿ ಪಿಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ

**09.01.2008** ರಂದು ಸಂಜೆ **5.40** ಗಂಟೆ ಸಮಯದಲ್ಲಿ ಚಾಸಾ-**1** ಹರೀಶ್ ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಃ **6/2008** ಎಂದು ಪ್ರವವ ವರನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ.

ಸಾಕ್ಷಿ ಒಂದು ದೂರನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಎಂದು ಮತ್ತು ಸದರಿ ದೂರು ಗುರುತಿಸಿದ್ದು, ಸದರಿ **ದೂರನ್ನು** ನಿಪಿ-**1** ಎಂದು, ಸಾಕ್ಷಿ ಸಹಿಯನ್ನು ನಿಪಿ-**1(**ಎ**)** ಎಂದು ಗುರುತಿಸಲಾಯಿತು.

ಸಾಕ್ಷಿ ಪ್ರ ವವ ವನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಎಂದು ಮತ್ತು ಸದರಿ ಪ್ರ.ವ.ವ ವನ್ನು ಗುರುತಿಸಿದ್ದು, ಸದರಿ **ಪ್ರ.ವ.ವ.ವನ್ನು** ನಿಪಿ-**2** ಎಂದು, ಸಾಕ್ಷಿ ಸಹಿಯನ್ನು ನಿಪಿ-**2(**ಎ**)** ಎಂದು ಗುರುತಿಸಲಾಯಿತು.

ದಿಃ **10.01.2008** ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಸಾಕ್ಷಿದಾರರಾದ ಚಾಸಾ-**11** ಮತ್ತು **15** ರವರ ಸಮಕ್ಷಮ ಚಾಸಾ-**1** ರವರು ತೋರಿಸಿದಂತೆ ಸ್ಥಳ ಪಂಚನಾಮೆ ಮಾಡಿದೆ. ಆ ಸಮಯದಲಿ ಚಾಸಾ-**1** ರವರು ಹಾಜರುಪಡಿಸಿದ ,ಎರಡು ದೊಣ್ಣೆ , ಎರಡು ಕಲ್ಲು ,ಒಂದು ಮಧ್ಯದ ಬಾಟಲ್ , ಒಂದು ಹರಿದ ಬಿಳಿ ಬನಿಯನ್ ಹಾಜರುಪಡಿಸಿದ್ದು ಅದನ್ನು ಅಮಾನತ್ತು ಪಡಿಸಿಕೊಂಡೆ.

ಸಾಕ್ಷಿ ಪಂಚನಾಮೆಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಎಂದು ಗುರುತಿಸಿದ್ದು, ಸದರಿ **ಪಂಚನಾಮೆಯನ್ನು** ನಿಪಿ-**3** ಎಂದು, ಸಾಕ್ಷಿ ಸಹಿಯನ್ನು ನಿಪಿ-**3(**ಎ**)** ಎಂದು ಗುರುತಿಸಲಾಯಿತು.

ಅಮಾನತ್ತು ಪಡಿಸಿಕೊಂಡ ಮಾಲನ್ನು ನೋಡಿದರೆ ಗುರುತಿಸಬಲ್ಲೆ . ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ,ಎರಡು ದೊಣ್ಣೆ , ಎರಡು ಕಲ್ಲು ,ಒಂದು ಮಧ್ಯದ ಬಾಟಲ್ , ಒಂದು ಹರಿದ ಬಿಳಿ ಬನಿಯನ್ ನೋಡಿ ಸದರಿ ಮುದ್ದೆ ಮಾಲು ಎಂದು ಗುರುತಿಸಿದ್ದು ಅವುಗಳನ್ನು ಎಂ.ಒ **-1** ರಿಂದ **6** ಎಂದು ಗುರುತಿಸಲಾಯಿತು.

ಅಮಾನತ್ತು ಪಡಿಸಿಕೊಂಡ ಮಾಲನ್ನು ಮಾಲು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ಸಲ್ಲಿಸಿದೆ.

ಅದೇ ದಿನ ಚಾಸಾ-**1** ರವರ ಮರು ಹೇಳಿಕೆ ಪಡೆದುಕೊಂಡು ಚಾಸಾ-**2** ರಿಂದ **15** ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆ.

ದಿಃ **12.01.2008** ರಂದು ಗಾಯಾಳು ಆದ ಚಾಸಾ-**1** ಮತ್ತು **2** ರವರ ಗಾಯದ ಪ್ರಮಾಣ ಪತ್ರವನ್ನು ಸರ್ಕಾರಿ ಆಸ್ಪತ್ರೆ ಕನಕಪುರದಿಂದ ಪಡೆದುಕೊಂಡೆ.

ಸಾಕ್ಷಿ ಎರಡು ಗಾಯದ ಪ್ರಮಾಣ ಪತ್ರಗಳನ್ನು ನೋಡಿ ಅದರಲ್ಲಿರುವ ಎರಡು ಸಹಿಗಳನ್ನು ನೋಡಿ ತನ್ನ ಸಹಿಗಳು ಮತ್ತು ಸದರಿ ಗಾಯದ ಪ್ರಮಾಣ ಪತ್ರಗಳು ಎಂದು ಗುರುತಿಸಿದ್ದು, ಸದರಿ **ಗಾಯದ ಪ್ರಮಾಣ ಪತ್ರಗಳನ್ನು** ನಿಪಿ-**4** ಮತ್ತು **5** ಎಂದು, ಸಾಕ್ಷಿ ಸಹಿಗಳನ್ನು ನಿಪಿ-**4(**ಎ**)** ಮತ್ತು **5(**ಎ**)** ಎಂದು ಗುರುತಿಸಲಾಯಿತು.

**23.01.2008** ರಂದು ಆರೋಪಿ ತರು ನ್ಯಾಯಾಲಯಕ್ಕೆ ಶರಣಾಗಿದ್ದು ನಂತರ ತನಿಖೆಯನ್ನು ಮುಕ್ತಾಯಗೊಳಿಸಿ ಆರೋಪಿ ತರ ವಿರುದ್ದ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ, ಅವರ ಪೈಕಿ ಇಂದು **3** ಜನ ನ್ಯಾಯಾಲಯದಲ್ಲಿ ಹಾಜರಿದ್ದಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ. ಎಸ್ ಡಿ ವಕೀಲರಿಂದಃ**

ಸಂಗಮ ಪ್ರವಾಸಿ ತಾಣಾ ಎಂದರೆ ಸರಿ. ಸಾಮಾನ್ಯ ಪ್ರವಾಸಿಗರು ಇರುತ್ತಾರೆ ಎಂದರೆ ಸರಿ. ಹಾಗಾಗೀ ಬಂದ್ ಬಸ್ತುಗಾಗಿ ಸಿಬ್ಬಂದಿಯನ್ನು ಠಾಣೆಯಿಂದ ನೇಮಿಸುತ್ತೇವೆ ಎಂದರೆ ಸರಿ. ದಿಃ 06.01.2008 ರಿಂದ ದಿಃ 09.01.2008 ರ ನಡುವಿನ ಅವಧಿಯಲ್ಲಿ ನನ್ನ ಠಾಣಾ ಸಿಬ್ಬಂದಿ ಒಂದು ಗಲಾಟೆ ನಡೆದಿದ್ದು ನಾವು ಹೋಗುವಷ್ಟರಲ್ಲಿ ಗಲಾಟೆ ಮುಗಿದಿತ್ತು ಎಂದು ಮಾಹಿತಿ ನೀಡಿದ್ದರು. ನಾನು ಸ್ಥಳಕ್ಕೆ ಹೋದಾಗ ಬೇರೆ ಪ್ರವಾಸಿಗರು ಇದ್ದರು ಎಂದರೆ ಸರಿ . 3 ದಿನ ತಡವಾಗಿ ಪಿರ್ಯಾದಿ ನೀಡಲಾಗಿದೆ ಎಂದರೆ ಸರಿ. ಪಂಚರಿಗೆ ನಾನು ನೋಟಿಸ್ ಕೊಟ್ಟಿಲ್ಲ.

ಪಂಚರು ಸ್ಥಳೀಯರಲ್ಲ ಎಂದರೆ ಸರಿ. ಸಂಗಮ ಹೊಳೆಯಾಗಿದ್ದರಿಂದ ತುಂಬಾ ಕಲ್ಲು ಸಿಗುತ್ತದೆ ಎಂದರೆ ಸರಿ. ಪ್ರವಾಸಿಗರು ಕುಡಿದು ಬಿಸಾಕಿದ ಬಾಟಲ್ ಸಿಗುತ್ತವೆ ಎಂದರೆ ಸರಿ. ಯಾರೋ ಬಿಸಾಕಿದ ಬಾಟಲ್ ನ್ನು ಈ ಪ್ರಕರಣಕ್ಕೆ ಅಳವಡಿಸಿಕೊಂಡಿದ್ದೇನೆಂದರ ಸರಿಯಲ್ಲ. ಎಂ. ಓ -1 ರಿಂದ 6 ಕ್ಕೂ ಆರೋಪಿ ಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಸ್ಥಳಕ್ಕೆ ಹೋಗಿರುವುದಿಲ್ಲ, ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ಯಾವ ಸಾಕ್ಷಿದಾರರ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ ಮತ್ತು ಏನನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯಲದಿದ್ದರೂ ಉದ್ದೇಶ ಪೂರ್ವಕವಾಗಿ ಯಾರದೋ ಮಾತು ಕೇಳಿಕೊಂಡು ಸುಳ್ಳು ಘಟನೆ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

**ಮೂರನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ., ಕನಕಪುರ.**